**ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ  ನಂ. 731/2022**

| | | | |
|---|---|---|---|
| **ಹೆಸರು** | : | **ರಾಜಶೇಖರ** | ಚಾ.ಸಾ. 4 |
| **ತಂದೆಯ  ಹೆಸರು** | : | **ಶಿವಲಿಂಗಪ್ಪ** | ಪ್ರಾ.ಸಾ. 1 |
| **ವಯಸ್ಸು** | : | **58 ವರ್ಷ** | ದಿನಾಂಕಃ 09-09-2024 |
| **ಉದ್ಯೋಗ** | : | **ಒಕ್ಕಲುತನ** | |
| **ವಾಸಸ್ಥಳ** | : | **ನಾಗಇದಲಾಯಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-13 ಮತ್ತು 5 ರವರು ನನಗೆ ಗೊತ್ತು.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಮತ್ತು ಚಾಸಾ 13 ಮತ್ತು 5 ರವರು ಇದ್ದೇವೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು.

ಈಗೆ 2 ವರ್ಷಗಳ ಹಿಂದೆ ಸಾಯಂಕಾಲ 3-30 ರಿಂದ 4 ಗಂಟೆ ಸುಮಾರಿಗೆ ತುಮಕುಂಟಾ-ನಾಗಇದಲಾಯಿ ರಸ್ತೆಯ ಮೇಲೆ ನಾನು ಹೋಗುತ್ತಿದ್ದಾಗ ಪೋಲಿಸರು ತಾವು ಬಂದಿದ್ದಾಗಿ ಸಾಕ್ಷಿ ಎಂದು ನನ್ನ ಸಹಿ ಪಡೆದಿದ್ದಾರೆ. ಸ್ಥಳದಲ್ಲಿ ಪೋಲಿಸರು ಭಾವಚಿತ್ರ ಪಡೆದು ನನ್ನ ಸಹಿ ಪಡೆದಿದ್ದಾರೆ. ಯಾವ ಕಾರಣಕ್ಕಾಗಿ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ.  ನಿಪಿ-1 ರ ಸಂಗತಿಗಳು ನನಗೆ ಗೊತ್ತಿಲ್ಲ. ಪೋಲಿಸರು ನನಗೆ ನಿಪಿ-1 ರ ಸಂಗತಿಗಳನ್ನು ಓದಿ ಹೇಳಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 11-10-2021 ರಂದು ಸಾಯಂಕಾಲ 4 ಗಂಟೆಗೆ ಪೋಲಿಸರು ಅಪಘಾತದ ಕಾರಣ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪೋಲಿಸರು ಪಂಚನಾಮೆ ಸಂಗತಿಗಳನ್ನು ನನಗೆ ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ MSS ವಕೀಲರಿಂದಃ ಇಲ್ಲಾ.</u>**

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**